
# ಗಂಗಾತಟದ ರತ್ನ



■ ಪ್ರವೀಣ ಕುಲಕರ್ಣಿ

ಹೊಟ್ಟೆ ತುಂಬಿಸಿಕೊಳ್ಳಲು ಭಿಕ್ಷಾನ್ನ ಬೇಡಿದರೂ ಸಾಲದೇ ಇದ್ದಾಗ ನಾಲ್ಕು ವರ್ಷದ ಆ ಬಾಲಕನನ್ನು ಆತನ ತಂದೆ–ತಾಯಿ ಆಶ್ರಮವೊಂದರಲ್ಲಿ, ಎರಡು ಹೊತ್ತಿನ ಗಂಜಿಯಾದರೂ ಸಿಗುತ್ತದೆ ಎಂಬ ಭಾವದಿಂದ, ಬಿಟ್ಟುಬಂದರು. ಆ ಹುಡುಗನಿಗೆ ಆರು ವರ್ಷಗಳಾಗಿದ್ದಾಗ ಒಂದುದಿನ, ಸೂರ್ಯೋದಯಕ್ಕೂ ಮುನ್ನ ಆತನ ತಾಯಿ ತೀರಿಕೊಂಡರೆ, ಸೂರ್ಯ ಉದಯಿಸಿದ ಸ್ವಲ್ಪ ಹೊತ್ತಿನಲ್ಲಿ ತಂದೆಯೂ ಕಣ್ಮುಚ್ಚಿದರು. ಕೇವಲ 4–5 ಗಂಟೆಗಳ ಅಂತರದಲ್ಲಿ ತಂದೆ–ತಾಯಿ ಇಬ್ಬರನ್ನೂ ಕಳೆದುಕೊಂಡ ಆತ ಅನಾಥನಾಗಿದ್ದ. ಇಬ್ಬರ ಚಿತೆಗೂ ಅಗ್ನಿಸ್ಪರ್ಶ ಮಾಡಿ ನಿಂತಿದ್ದ ಆ ಪುಟ್ಟ ಬಾಲಕನನ್ನು ಕಂಡವರು ಇನ್ನು ಈತನ ಜೀವನವೂ ಮುಗಿಯಿತು ಎಂದುಕೊಂಡರು. ಆದರೆ, ಆ ವಾಮನ, ತ್ರಿವಿಕ್ರಮನಂತೆ ಬೆಳೆದ. ತನ್ನ ಆಯುಷ್ಯದಲ್ಲಿ ಮೂರು ಶತಮಾನಗಳನ್ನು ಕಾಣುವ ಅದೃಷ್ಟವನ್ನೂ ಪಡೆದ. ನೂರು ವಸಂತಗಳನ್ನು ಪೂರೈಸಿ ನಸುನಕ್ಕ. ಸಾವಿರಾರು ಕುಷ್ಠರೋಗಿಗಳ ಆರೈಕೆ ಮಾಡಿದ. ಲಕ್ಷಾಂತರ ಅನುಯಾಯಿಗಳಿಗೆ ಬದುಕಿನ ಮಾರ್ಗವನ್ನೂ ತೋರಿದ!

'ಬೂದಿ'ಯಿಂದ ಮೇಲೆದ್ದು ಹಿಮಾಲಯ ಸದೃಶವಾಗಿ ಬೆಳೆದು ನಿಂತ ಆ ಬಾಲಕ ಬೇರೆ ಯಾರೂ ಅಲ್ಲ, ವಾರಾಣಸಿಯ ಸ್ವಾಮಿ ಶಿವಾನಂದ. ಪಾಸ್‌ಪೋರ್ಟ್, ಆಧಾರ್ ಸೇರಿದಂತೆ ಸರ್ಕಾರದ ಅಧಿಕೃತ ದಾಖಲೆಗಳ ಪ್ರಕಾರ, ಅವರಿಗೀಗ 129ರ ಹರೆಯ (ಜನನ: 1896ರ ಆಗಸ್ಟ್ 8). ಜಗತ್ತನ್ನು ಕಾಡುವ ತ್ರೀ–ಡಿ ಸಮಸ್ಯೆಗಳಿಂದ (**desire**–ಕಾಮನೆ, **disease**–ಕಾಯಿಲೆ, **depression**–ಖಿನ್ನತೆ) ಅವರು ಮುಕ್ತ, ಮುಕ್ತ. ವಿಭಜನಾಪೂರ್ವ ಬಂಗಾಳದ ಒಂದು ಪುಟ್ಟ ಹಳ್ಳಿಯಲ್ಲಿ ಶುರುವಾದ ಅವರ ಬದುಕಿನ ಯಾತ್ರೆ ಸಹಜ ಮಾರ್ಗದಲ್ಲಿ ಸಾಗಿ, ಹಲವು ದೇಶಗಳನ್ನು ಸುತ್ತಿ, ವಾರಾಣಸಿಯನ್ನು ತಲುಪಿ ಅನಂತವಾಗಿ ಬೆಳೆದು ನಿಂತಿದೆ. ಯಾರಿಂದಲೂ ಈ ಸ್ವಾಮಿ ದೇಣಿಗೆಯನ್ನು ಸ್ವೀಕರಿಸುವುದಿಲ್ಲ. ಕೊಡುಗೈ ದಾನಿಗಳು ಬಳಿ ಬಂದರೆ ಬಡವರ ಕಡೆಗೆ ಕೈ ತೋರಿಬಿಡುತ್ತಾರೆ.

ಶಿವಾನಂದರಿಗೆ ಇಚ್ಛೆ ಎನ್ನುವುದೇ ಇಲ್ಲ. ಚಳಿಯೇ ಇರಲಿ, ಮಳೆಯೇ ಬರಲಿ, ನಸುಕಿನ 3 ಗಂಟೆಗೆ ಏಳುವ ಅವರು ಗಂಟೆಗಳವರೆಗೆ ಯೋಗ–ಧ್ಯಾನ–ನಡಿಗೆಯಲ್ಲಿ ತೊಡಗುತ್ತಾರೆ. ಬಿಸಿನೀರನ್ನು ಎಂದಿಗೂ ಅವರು ಮೈಮೇಲೆ ಹಾಕಿಲ್ಲ. ತಣ್ಣೀರು ಸ್ನಾನವೇ ಆಗಬೇಕು. ಮಧ್ಯಾಹ್ನ ಮತ್ತು ರಾತ್ರಿ ತಲಾ ಎರಡು ಸಣ್ಣ ರೊಟ್ಟಿ, ನಂಜಿಕೊಳ್ಳಲು ಬೇಯಿಸಿದ ತರಕಾರಿ ಇಲ್ಲವೇ ದಾಲ್, ಇಷ್ಟೇ ಅವರ ಊಟ. ಬಡವರಿಗೆ ಸಿಗದ ಹಣ್ಣು–ಹಂಪಲು ನನಗೇಕೆ ಎನ್ನುವ ಅವರು, ಅವುಗಳನ್ನು ವರ್ಜಿಸಿ ನಮ್ಮ ನಡುವಿನ ಗಾಂಧಿಯಂತೆ ಗೋಚರಿಸುತ್ತಾರೆ. ಎಣ್ಣೆ ಮತ್ತು ಸಕ್ಕರೆ ಬಳಸಿ ತಯಾರಿಸಿದ ಪದಾರ್ಥಗಳು ದೇಹಕ್ಕೆ ಅಗತ್ಯವಿಲ್ಲ ಎಂದು ಪ್ರತಿಪಾದಿಸುವ ಅವರು, ಅಂತಹ ತಿಂಡಿಗಳನ್ನು ತಮ್ಮ ಊಟದ ತಟ್ಟೆಯಿಂದ ಆಚೆಗೆ ಇಟ್ಟಿದ್ದಾರೆ. ಶಿವಾನಂದರು ಭಾರತದ ಅತ್ಯಂತ ಹಿರಿಯ ವ್ಯಕ್ತಿ ಮಾತ್ರವಲ್ಲ, ಅತ್ಯಂತ ಸಂತೃಪ್ತ ಭಾವದ ವ್ಯಕ್ತಿ ಕೂಡ. 'ಇಡೀ ಜಗತ್ತೇ ನನ್ನ ಮನೆ. ಎಲ್ಲ ಜನ ನನ್ನ ತಂದೆ–ತಾಯಿಗಳು. ಅವರ ಸೇವೆ ಮಾಡುವುದು ಮತ್ತು ಅವರನ್ನು ಆರಾಧಿಸುವುದೇ ನನ್ನ ಧರ್ಮ' – ಇದು ಅವರು ಪ್ರತಿಪಾದಿಸುವ ಫಿಲಾಸಫಿ. 'ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು' ಎಂಬ ಕವಿವಾಣಿಯಂತೆ ಎದೆಯ ದನಿಗೆ ಓಗೊಟ್ಟು, ಮಾನವೀಯ ಸೇವೆಯನ್ನೇ ಧರ್ಮವನ್ನಾಗಿ ಸ್ವೀಕರಿಸಿದವರು.

ಮೊಣಕಾಲಿನವರೆಗೆ ಒಂದು ಪಂಚೆ ಸುತ್ತಿಕೊಂಡು, ಮೇಲೊಂದು ದೊಗಳೆ ಅಂಗಿ ಹಾಕಿಕೊಂಡು ಗಂಗಾ ನದಿ ತಟದಲ್ಲಿ ಈ ಸ್ವಾಮಿ ಹೊರಟು ನಿಂತರೆಂದರೆ ಬಡವರ–ರೋಗಿಗಳ ಸೇವೆಯ 'ಪೂಜೆ' ನಡೆಯಲಿಕ್ಕಿದೆ ಎಂದೇ ಅರ್ಥ. ಈ ವಯಸ್ಸಿನಲ್ಲೂ ಸರ್ವಾಂಗಾಸನ ಸೇರಿದಂತೆ ಹಲವು ಆಸನಗಳನ್ನು ನಿತ್ಯ ತಪ್ಪದೇ ಹಾಕುವ ಅವರು, ಬೆಳಗಿನ ಮೂರರಿಂದ ರಾತ್ರಿ ಒಂಬತ್ತರವರೆಗೆ ಸದಾ ಚೈತನ್ಯದ ಚಿಲುಮೆಯಾಗಿ ಕಾಲ ಕಳೆಯುತ್ತಾರೆ. ಭಿಕ್ಷುಕರು, ಬೀದಿ ಬದಿಯಲ್ಲಿ ಬಿದ್ದ ಅನಾಥರು ಎಂತಹ ಕಾಯಿಲೆಯಿಂದ ಬಳಲುತ್ತಿದ್ದರೂ ಅವರ ಕಣ್ಣೀರು ಒರೆಸಿ, ಅವರ ಗಾಯಗಳಿಗೆ ಮುಲಾಮು ಸವರಿ, ಮೇಲೊಂದು ಹೊದಿಕೆ ಹೊದಿಸಿ, ಊಟ ಕೊಟ್ಟು ಬರುತ್ತಾರೆ. ಔಪಚಾರಿಕ ಶಿಕ್ಷಣ ಪಡೆಯದಿದ್ದರೂ ಶಿವಾನಂದರು ಇಂಗ್ಲಿಷ್‌ನಲ್ಲಿ ಅಸ್ಖಲಿತವಾಗಿ ಮಾತನಾಡುತ್ತಾರೆ. 32 ದೇಶಗಳನ್ನು ಸುತ್ತಿದ್ದಾರೆ. ತಮ್ಮ ಅನುಭವಕ್ಕೆ ನಿಲುಕದ, ತಮಗೆ ಗೊತ್ತಿಲ್ಲದ ಯಾವುದರ ಕುರಿತೂ ಅವರು ಮಾತನಾಡುವುದಿಲ್ಲ. ನಿಜ ಹೇಳಬೇಕೆಂದರೆ, ಅವರು ಮಾತನಾಡುವುದೇ ಕಡಿಮೆ. ನಿಶ್ಶಬ್ದವಾದ ವ್ಯಕ್ತಿತ್ವದಿಂದ, ಪ್ರಶಾಂತ ತೇಜಸ್ಸಿನಿಂದ ಕಂಗೊಳಿಸುವ ಶಿವಾನಂದರು ಒಂದು ಉದಾತ್ತ ಪರಂಪರೆಯ ಪ್ರತಿಮಾರೂಪವಾಗಿ ಕಾಣುತ್ತಾರೆ.

'ನನ್ನ ಬದುಕಿನಲ್ಲಿ ಸಿಕ್ಕಿರುವುದಕ್ಕೆ ನಾನು ತೃಪ್ತನಾಗಿರಬೇಕು. ಪ್ರತಿಫಲಾಪೇಕ್ಷೆ ಇಲ್ಲದೆ ಕಾರ್ಯತತ್ಪರನಾಗಿರಬೇಕು' ಎಂಬ ಭಾವ ಅವರ ಆಧ್ಯಾತ್ಮಿಕ ದೃಷ್ಟಿ. ಅಧ್ಯಾತ್ಮದಲ್ಲಿ ಸಾಕಷ್ಟು ಮುಂದುವರಿದರೂ ಅವರ ದೃಷ್ಟಿ ಸಂಪ್ರದಾಯಕ್ಕೆ ಸೀಮಿತವಲ್ಲ. ಮೌಢ್ಯಾಚರಣೆಗಳನ್ನು ಅವರು ಸಹಿಸುವುದೂ ಇಲ್ಲ. ಮಾನವೀಯತೆಯ ಪಾಠವನ್ನು ಹೇಳದೆ ಬಿಡುವುದಿಲ್ಲ. 'ಸ್ವಚ್ಛ ಕಾಂತಿಯನರ್ಘ್ಯರತ್ನಂಗಳೆನಿತೊ/ ಆಳಗಾಣದ ಕಡಲ ಕತ್ತಲೊಳಗಡಗಿಹವು' ಎಂಬ ಥಾಮಸ್ ಗ್ರೇ ಅವರ ವಾಣಿಯಂತೆ ನಮ್ಮ ಸಮಾಜದ ನಡುವೆ ಇಂತಹ ರತ್ನಗಳು ಇದ್ದೇ ಇರುತ್ತವೆ. ಆ ರತ್ನಗಳ ಬೆಳಕು ಮಾನವೀಯತೆಯ ವಿಕಾಸಕ್ಕೆ ದಾರಿದೀಪಗಳು ಆಗುತ್ತಲೇ ಇರುತ್ತವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65